


بسم اللهِ الرّحمٰن الرّحيم

# ಮುಸ್ಲಿಹ್ ಮೌಊದ್(ರ) ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **23–02–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ ـ بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ನಾನು ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿಯ ಕೆಲವು ಮಗ್ಗುಲುಗಳನ್ನು ಪ್ರಸ್ತಾಪಿಸುತ್ತೇನೆ. ಪ್ರತಿಯೊಬ್ಬ ಅಹ್ಮದಿಗೆ ತಿಳಿದಿರುವಂತೆ ಈ ಭವಿಷ್ಯವಾಣಿ ಈಡೇರಿದ್ದಕ್ಕಾಗಿ ಪ್ರತಿ ವರ್ಷ ಜಲ್ಸವನ್ನು ಸಹ ನಡೆಸಲಾಗುತ್ತದೆ. ಇದು ಫೆಬ್ರವರಿ 20, 1886ರ ಭವಿಷ್ಯವಾಣಿಯಾಗಿದೆ. ಅನೇಕ ಗುಣಗಳನ್ನು ಹೊಂದಿರುವ ಒಬ್ಬ ಪುತ್ರನ ಬಗ್ಗೆ ಇದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಸುವಾರ್ತೆ ನೀಡಲಾಗಿತ್ತು. ಆದರೆ ಈ ಕುರಿತು ಹೇಳುವುದಕ್ಕೆ ಮುಂಚಿತವಾಗಿ ಮಕ್ಕಳ ಮತ್ತು ಕೆಲವು ಯುವಕರ ಒಂದು ಪ್ರಶ್ನೆಗೆ ನಾನು ಉತ್ತರ ನೀಡಲು ಬಯಸುತ್ತೇನೆ. ಅದೇನೆಂದರೆ, ನಾವು ಹುಟ್ಟುಹಬ್ಬ ಆಚರಿಸದೇ ಇರುವಾಗ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಹುಟ್ಟುಹಬ್ಬವನ್ನು ಏಕೆ ಆಚರಿಸಲಾಗುತ್ತದೆ ಎಂದು ಅವರು ಪ್ರಶ್ನಿಸುತ್ತಾರೆ. ಈ ಬಗ್ಗೆ ಗೊತ್ತಿರಬೇಕಾದ ಸಂಗತಿಯೇನೆಂದರೆ, ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ)ರ ಹುಟ್ಟುಹಬ್ಬವನ್ನು ಆಚರಿಸಲಾಗುವುದಿಲ್ಲ. ಬದಲಾಗಿ ಆ ಭವಿಷ್ಯವಾಣಿ ಈಡೇರಿದ ಕಾರಣದಿಂದ ಜಲ್ಸ ನಡೆಸಲಾಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಜನನ ಕ್ರಿ.ಶ. 1889, ಜನವರಿ 12ರಂದು ಆಗಿತ್ತು. ಮುಸ್ಲಿಹ್ ಮೌಊದ್(ರ)ರ ಭವಿಷ್ಯವಾಣಿ ಏನು ಎಂಬುದರ ಕುರಿತು ಹೆತ್ತವರು ಮಕ್ಕಳಿಗೆ ಓದಿ ಹೇಳಿಕೊಡಬೇಕು ಮತ್ತು ಮನವರಿಕೆ ಮಾಡಿಸಬೇಕು. ಇದೊಂದು ಮಹತ್ತಾದ ಭವಿಷ್ಯವಾಣಿಯಾಗಿದೆ. ಹಿಂದಿನ ದೈವಿಕ ಗ್ರಂಥಗಳಲ್ಲಿ ಇರುವ ಪ್ರಕಾರ ಮತ್ತು ಪ್ರವಾದಿಗಳು ಸುವಾರ್ತೆ ನೀಡಿದಂತೆ ಹಾಗೂ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ಇದನ್ನು ಘೋಷಿಸಲು ಹೇಳಿದ್ದನು.

ಇದೊಂದು ದೀರ್ಘವಾದ ಭವಿಷ್ಯವಾಣಿಯಾಗಿದೆ. ಈ ಭವಿಷ್ಯವಾಣಿಯಲ್ಲಿ ಆ ಪುತ್ರನ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ. ಅವುಗಳಲ್ಲಿ ಒಂದೆರಡರ ಕುರಿತು ನಾನು ಪ್ರಸ್ತಾಪಿಸುತ್ತೇನೆ. “ಪುತ್ರನು ಬಹಳ ಬುದ್ಧಿವಂತ ಮತ್ತು ವಿವೇಕಶಾಲಿ ಆಗುವನು. ಅವನನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗುವುದು. ಬಂಧಿಗಳ ಬಿಡುಗಡೆಗೆ ಅವನು ಕಾರಣೀಭೂತನಾಗುವನು.” ಎಂದು ಭವಿಷ್ಯವಾಣಿಯಲ್ಲಿ ನುಡಿಯಲಾಗಿದೆ. ಇದು ದೀರ್ಘವಾದ ಆ ಭವಿಷ್ಯವಾಣಿಯ ಕೆಲವು ಸಾಲುಗಳಾಗಿವೆ. ಹೇಳಲಾದ ಕಾಲಾವಧಿಯೊಳಗೆ ಆ ಪುತ್ರನು ಜನಿಸಿದ್ದನ್ನು ನಾವು ನೋಡಿದೆವು. ಅವರು ಭವಿಷ್ಯವಾಣಿಯಲ್ಲಿ ನುಡಿಯಲಾದ ಎಲ್ಲ ಐವತ್ತು ಐವತ್ತೆರಡು ಸಂಗತಿಗಳ ಸಾಕ್ಷಾತ್ಕಾರವಾದರು. ಹಝ್ರತ್ ಮುಸ್ಲಿಹ್ ಮೌಊದ್(ರ)ರ ಖಿಲಾಫತ್ ಕಾಲದ ಪ್ರತಿಯೊಂದು ದಿನವೂ ಈ ಭವಿಷ್ಯವಾಣಿಯ ಈಡೇರಿಕೆಯ ವೈಭವವನ್ನು ಪ್ರಕಟಗೊಳಿಸುತ್ತಿತ್ತು ಮತ್ತು ಅಹ್ಮದಿಯಾ ಜಮಾಅತಿನ ಪ್ರಗತಿಯ ಪ್ರತಿಯೊಂದು ದಿನವೂ ಇದರ ಬೆಳಗುವ ಸಾಕ್ಷಿಯಾಗಿದೆ. ಈ ಭವಿಷ್ಯವಾಣಿಗೆ ಸಂಬಂಧಪಟ್ಟು ನಾನು ನೀತಿವಂತರಾದ ಕೆಲವು ವ್ಯಕ್ತಿಗಳ ಸಾಕ್ಷ್ಯಗಳನ್ನು ಮುಂದಿರಿಸುತ್ತೇನೆ. ಅವರಿಗೆ ಜಮಾಅತಿನೊಂದಿಗೆ ಯಾವುದೇ ಸಂಬಂಧವಿಲ್ಲ ಮತ್ತು ಅವರು ಅಖಂಡ ಭಾರತದ ಪ್ರಸಿದ್ಧ ವ್ಯಕ್ತಿಗಳಾಗಿದ್ದರು.

ಒಬ್ಬ ಸಂಶೋಧಕ, ಲೇಖಕ, ಸಾಹಿತಿ, ಅಂಕಣಗಾರ ಹಾಗೂ ಚರಿತ್ರೆಗಾರರಾದ ಮೌಲಾನಾ ಗ್ಹುಲಾಂ ರಸೂಲ್ ಮಹರ್ ಸಾಹಿಬ್, ಶೇಖ್ ಅಬ್ದುಲ್‌ಮಾಜಿದ್ ಸಾಹಿಬ್‌ರೊಡನೆ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಬಗ್ಗೆ ಹೀಗೆ ಹೇಳಿದರು: ಆ ಮಹತ್ತಾದ ವ್ಯಕ್ತಿಯ ಸಾಧನೆಗಳ ಕುರಿತು ಇರುವ ಸಂಪೂರ್ಣ ಮಾಹಿತಿ ನಿಮ್ಮ ಯಾವುದೇ ಗ್ರಂಥದಲ್ಲಿ ಇಲ್ಲ. ನಾವು ಅವರನ್ನು ಬಹಳ ಸಮೀಪದಿಂದ ನೋಡಿದ್ದೇವೆ. ಅವರನ್ನು ಅನೇಕ ಬಾರಿ ಭೇಟಿ ಮಾಡಿದ್ದೇವೆ. ಮುಸ್ಲಿಂ ಸಮುದಾಯಕ್ಕಾಗಿ ಅವರು ಪರಿಪೂರ್ಣವಾದ ತ್ಯಾಗಿಯಾಗಿದ್ದರು. ಪಕ್ಷಪಾತದ ಹಗೆ ಅವರಲ್ಲಿ ಹೆಸರಿಗೆ ಕೂಡ ಇದ್ದಿರಲಿಲ್ಲ. ಅವರು ಅತ್ಯಂತ ಬುದ್ಧಿವಂತರಾಗಿದ್ದರು. ಆದರೆ ದೌರ್ಭಾಗ್ಯವಶಾತ್ ಮುಸ್ಲಿಮರು ಮಿರ್ಝಾ ಸಾಹಿಬ್(ರ)ರಿಗೆ ನೀಡಬೇಕಾದ ಬೆಲೆಯನ್ನು ನೀಡಲಿಲ್ಲ. ಕಠಿಣವಾದ ವಿರೋಧದ ಬಿರುಗಾಳಿ ಇದ್ದೂ ನಾನು ಮಿರ್ಝಾ ಸಾಹಿಬ್(ರ)ರನ್ನು ಎಂದಿಗೂ ದುಃಖಿತರಾಗಿ ಮತ್ತು ಉತ್ಸಾಹರಹಿತರಾಗಿ ಕಂಡಿಲ್ಲ.

“ಭಾಷೆಗಳ ಲೋಕದಲ್ಲಿ ಅರಬೀ ಭಾಷೆಯ ಸ್ಥಾನ” ಎಂಬ ವಿಷಯದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಭಾಷಣದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಲಾಲಾ ಭೀಮ್‌ಸೇನರ ಪುತ್ರ ಮತ್ತು ಕಾಶ್ಮೀರದ ಮಾಜಿ ಚೀಫ್ ನ್ಯಾಯಾಧೀಶರಾದ ಸನ್ಮಾನ್ಯ ಕನ್‌ವರ್ ಸೇನ್ ಸಾಹಿಬ್‌ರು ತನ್ನ ಭಾಷಣದಲ್ಲಿ ಹೀಗೆ ಹೇಳಿದರು: ನೀಡಲಾದ ಭಾಷಣವು ಅತ್ಯಂತ ಜ್ಞಾನಪರ ಮತ್ತು ತಾತ್ವಿಕ ವೈಭವವನ್ನು ಒಳಗೊಂಡಿದೆ. ಈ ಲೆಕ್ಚರಿನ ಪ್ರಭಾವ ನನ್ನ ಹೃದಯದಲ್ಲಿ ದೀರ್ಘಕಾಲದ ವರೆಗೂ ಇರುವುದು ಎಂಬ ಪ್ರತೀಕ್ಷೆ ನನಗೆ ಇದೆ.

ಭೌತಿಕ ವಿದ್ಯಾಭ್ಯಾಸದ ಮಟ್ಟದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರೈಮರಿ ಕೂಡ ತೇರ್ಗಡೆ ಹೊಂದಿರಲಿಲ್ಲ. ಅಲ್ಲಾಹನು ವಾಗ್ದಾನ ಮಾಡಿದ ಜ್ಞಾನದಿಂದ ಅವರನ್ನು

ಅಲ್ಲಾಹನು ತುಂಬಿಸಿದ್ದನು. ಅದರ ಬಗ್ಗೆ ಹೊಗಳದೇ ಇರಲು ಅನ್ಯರಿಂದಲೂ ಸಾಧ್ಯವಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಖಲೀಫರಾದ ಕೆಲವು ದಿನಗಳ ನಂತರ ಅಮೇರಿಕದ ಒಬ್ಬ ಪಾದ್ರಿ ಖಾದಿಯಾನಿಗೆ ಬಂದರು ಮತ್ತು ಕೆಲವು ಮುಖ್ಯ ಧಾರ್ಮಿಕ ಪ್ರಶ್ನೆಗಳನ್ನು ಮುಂದಿರಿಸುತ್ತಾ ಹೀಗೆ ಹೇಳಿದರು: ಮುಸ್ಲಿಮರ ಅತ್ಯಂತ ದೊಡ್ಡ ಪಂಡಿತರು ಮತ್ತು ವಿದ್ವಾಂಸರು ಕೂಡ ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಇಂದಿನ ತನಕ ನನಗೆ ನೀಡಿಲ್ಲ. ನಾನು ಈ ಪ್ರಶ್ನೆಗಳನ್ನು ನಿಮ್ಮ ಖಲೀಫ ಸಾಹಿಬ್‌ರ ಸನ್ನಿಧಿಯಲ್ಲಿ ಮುಂದಿರಿಸಲಿಕ್ಕಾಗಿ ವಿಶೇಷವಾಗಿ ಬಂದಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅತ್ಯಂತ ಸಮಾಧಾನದಿಂದ ಈ ಎಲ್ಲ ಪ್ರಶ್ನೆಗಳನ್ನು ಆಲಿಸಿದರು ಮತ್ತು ಅವುಗಳಿಗೆ ಎಂತಹ ತೃಪ್ತಿಕರವಾದ ಉತ್ತರಗಳನ್ನು ನೀಡಿದರು ಎಂದರೆ ಪಾದ್ರಿ ಸಾಹಿಬ್ ಹೀಗೆ ಹೇಳಿದರು: ನಾನು ಇಂದಿನ ತನಕ ಇಂತಹ ವಿವೇಕಯುತ ಮಾತುಕತೆ ಮತ್ತು ಇಂತಹ ಸಮರ್ಥ ಭಾಷಣವನ್ನು ಯಾವನೇ ಮುಸ್ಲಿಮನ ಬಾಯಿಯಿಂದ ಆಲಿಸಿಲ್ಲ. ನಿಮ್ಮ ಖಲೀಫರು ಬಹಳ ಶ್ರೇಷ್ಠ ವಿದ್ವಾನ್ ಎಂದು ತೋರುತ್ತದೆ. ಧಾರ್ಮಿಕ ಲೋಕದ ಮೇಲೆ ಅವರಿಗೆ ಆಳವಾದ ದೃಷ್ಟಿಯಿದೆ. ಹೀಗೆ ಹೇಳಿ ಪಾದ್ರಿ ಬಹಳ ಆದರದಿಂದ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಕೈಯನ್ನು ಚುಂಬಿಸಿ ಮರಳಿ ಹೋದರು.

ಸಿಯಾಸತ್ ಪತ್ರಿಕೆ ಹೀಗೆ ಬರೆಯಿತು: ಧಾರ್ಮಿಕ ಭಿನ್ನಾಭಿಪ್ರಾಯದ ಮಾತನ್ನು ಬಿಟ್ಟುಕೊಂಡು ನೋಡುವುದಾದರೆ ಲೇಖನ ಮತ್ತು ಗ್ರಂಥ ರಚನೆಯಲ್ಲಿ ಜನಾಬ್ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ) ಮಾಡಿದ ಕಾರ್ಯವು ಗಾತ್ರದ ದೃಷ್ಟಿಯಲ್ಲೂ ಉಪಯುಕ್ತತೆಯ ದೃಷ್ಟಿಯಲ್ಲೂ ಶ್ಲಾಘನೀಯವಾಗಿದೆ.

ಮೌಲಾನಾ ಮುಹಮ್ಮದ್ ಅಲಿ ಜೌಹರ್ ಸಾಹಿಬ್‌ರು ಲಂಡನಿನ ರೌಂಡ್ ಟೇಬಲ್ ಸಭೆಗೆ ಸಂಬಂಧಿಸಿ ತನ್ನ ಪತ್ರಿಕೆಯಾದ ಹಮ್‌ದರ್ದ್‌ನಲ್ಲಿ ಬರೆಯುತ್ತಾರೆ: ಜನಾಬ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಮತ್ತು ಅವರ ಈ ಸಂಘಟಿತ ಜಮಾಅತಿನ ಪ್ರಸ್ತಾಪವನ್ನು ಈ ಸಾಲುಗಳಲ್ಲಿ ಪ್ರಸ್ತಾಪಿಸದೇ ಇದ್ದರೆ ಅದು ಕೃತಘ್ನತೆ ಆಗುವುದು. ಅವರು ಧಾರ್ಮಿಕ ಭಿನ್ನತೆಯನ್ನು ಲೆಕ್ಕಿಸದೇ ಎಲ್ಲ ಮುಸ್ಲಿಮರ ಏಳಿಗೆಗಾಗಿ ಸಂಪೂರ್ಣ ಗಮನವನ್ನು ಕೊಟ್ಟರು. ಈ ಜನರು ಈಗ ಒಂದೆಡೆ ಮುಸ್ಲಿಮರ ರಾಜಕೀಯದಲ್ಲಿ ಅಭಿರುಚಿ ಇರಿಸುತ್ತಿದ್ದಾರೆ. ಮತ್ತೊಂದೆಡೆ ಮುಸ್ಲಿಮರ ಸಂಪರ್ಕ ಮತ್ತು ವ್ಯಾಪಾರದ ವ್ಯವಸ್ಥೆಯಲ್ಲಿ ಅತ್ಯಂತ ಪರಿಶ್ರಮದಿಂದ ನಿರತರಾಗಿರುವರು. ಈ ಸಂಘಟಿತ ಪಂಗಡದ ವೈಖರಿ ಇಸ್ಲಾಮಿನ ಬಹುಭಾಗಕ್ಕೆ ಸಾಮಾನ್ಯವಾಗಿ ಮತ್ತು ಅದರ ವ್ಯಕ್ತಿಗಳಿಗೆ ವಿಶೇಷವಾಗಿ ಮಾರ್ಗದೀಪವಾಗುವುದು.

ಡಾಕ್ಟರ್ ಅಲ್ಲಾಮ ಮುಹಮ್ಮದ್ ಇಖ್ಬಾಲ್‌ರಿಗೆ ಸಂಬಂಧಪಟ್ಟ ದಾಖಲೆಗಳಲ್ಲಿ ಕೆಲವು ಸಂಗತಿಗಳಿವೆ. ಕ್ರಿ.ಶ. 1927, ಮಾರ್ಚ್ 24ರಂದು ಲಾಹೋರಿನಲ್ಲಿ ಒಂದು ಸಭೆ ನಡೆದಿತ್ತು. ಅಲ್ಲಾಮ ಇಖ್ಬಾಲ್ ಅದರ ಅಧ್ಯಕ್ಷರಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಅಲ್ಲಿ ಭಾಷಣ ಮಾಡಿದ್ದರು. ಅಲ್ಲಾಮ ಸಾಹಿಬ್ ಹೇಳಿದರು: ಬಹಳ ದೀರ್ಘ ಕಾಲದ ನಂತರ ಲಾಹೋರಿನಲ್ಲಿ ಇಂತಹ ಭಾಷಣವನ್ನು ಆಲಿಸಲು ಸಾಧ್ಯವಾಯಿತು. ವಿಶೇಷವಾಗಿ ಪವಿತ್ರ ಖುರ್‌ಆನಿನ ವಚನಗಳಿಂದ ಮಿರ್ಝಾ ಸಾಹಿಬ್ ನೀಡಿದ ವ್ಯಾಖ್ಯಾನ ಅತ್ಯಂತ ಉತ್ತಮವಾಗಿತ್ತು. ನನಗೆ ಈ ಭಾಷಣದಿಂದ ಲಭಿಸುತ್ತಿರುವ ಅನುಭೂತಿ ಹೊರಟುಹೋಗದೇ ಇರಲು ನಾನು ನನ್ನ ಭಾಷಣವನ್ನು ಹೆಚ್ಚು ವಿಸ್ತರಿಸಲು ಬಯಸುವುದಿಲ್ಲ.

ಕ್ರಿ.ಶ. 1919ರಲ್ಲಿ ಲಾಹೋರಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) "ಇಸ್ಲಾಮಿನಲ್ಲಿ ಭಿನ್ನತೆಯ ಆರಂಭ" ಎಂಬ ವಿಷಯದಲ್ಲಿ ಒಂದು ಮಹತ್ತಾದ ಲೆಕ್ಚರ್ ನೀಡಿದ್ದರು. ಲಾಹೋರಿನ ಇಸ್ಲಾಮಿಯ ಕಾಲೇಜಿನ ಪ್ರಾಂಶುಪಾಲರಾದ ಸಯ್ಯದ್ ಅಬ್ದುಲ್‌ಖಾದಿರ್ ಸಾಹಿಬ್ ತನ್ನ ಅಧ್ಯಕ್ಷ ಭಾಷಣದಲ್ಲಿ ಹೀಗೆ ಹೇಳಿದರು: ಈ ಭಾಷಣ ಅತ್ಯಂತ ಜ್ಞಾನಪರವಾಗಿದೆ. ನನಗೂ ಇಸ್ಲಾಮಿನ ಚರಿತ್ರೆಯ ಬಗ್ಗೆ ಸ್ವಲ್ಪ ಅರಿವಿದೆ. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದ ಭಿನ್ನತೆಗಳ ಬಗ್ಗೆ ಆಳವಾಗಿ ಗೊತ್ತಿರುವ ಹಾಗೂ ಆ ವಿನಾಶಕಾರಿ ಮತ್ತು ಮೊದಲ ಆಂತರಿಕ ಪಿತೂರಿಯ ಕಾರಣಗಳನ್ನು ಗೊತ್ತು ಮಾಡಿರುವ ಚರಿತ್ರೆಗಾರರು ಮುಸ್ಲಿಮರಲ್ಲಿ ಮತ್ತು ಮುಸ್ಲಿಮೇತರರಲ್ಲಿ ಬಹಳ ಕಡಿಮೆ ಎಂದು ನಾನು ಧೈರ್ಯದಿಂದ ಹೇಳಬಲ್ಲೆನು. ಖಿಲಾಫತಿನ ಆಸ್ಥಾನ ದೀರ್ಘ ಕಾಲದ ವರೆಗೂ ಅಸ್ಥಿರವಾಗಲು ಕಾರಣವಾದ ಘಟನೆಗಳನ್ನು ಮಿರ್ಝಾ ಸಾಹಿಬ್‌ರು ಅತ್ಯಂತ ಸ್ಪಷ್ಟವಾಗಿ ಮತ್ತು ಸಲೀಸಾಗಿ ವಿವರಿಸಿದರು. ಇಂತಹ ತಾರ್ಕಿಕ ವಿಷಯವು ಮೊದಲೆಂದೂ ಇಸ್ಲಾಮಿನ ಚರಿತ್ರೆಯೊಂದಿಗೆ ಅಭಿರುಚಿ ಹೊಂದಿರುವ ಸಹೋದರರ ದೃಷ್ಟಿಯಲ್ಲಿ ಬಿದ್ದಿರಲಾರದು ಎಂದು ನಾನು ಹೇಳಬಲ್ಲೆ.

1924, ಆಗಸ್ಟ್ 10ರಂದು ಡಮಸ್ಕಸಿನ ಅಲ್‌ಇಮ್ರಾನ್ ಪತ್ರಿಕೆ "ಡಮಸ್ಕಸ್‌ನಲ್ಲಿ ಮಹ್‌ದಿ" ಎಂಬ ಶೀರ್ಷಿಕೆಯಡಿಯಲ್ಲಿ ಹೀಗೆ ಬರೆಯಿತು: ಅತ್ಯಂತ ಆಳವಾಗಿ ಅನ್ವೇಷಣೆ ನಡೆಸುವವರಾಗಿ, ಎಲ್ಲ ಧರ್ಮಗಳ ಮತ್ತು ಅವುಗಳ ಚರಿತ್ರೆ, ತತ್ವದರ್ಶನದ ಬಗ್ಗೆ ಆಳವಾಗಿ ಪಠಿಸಿರುವವರಾಗಿ ಹಾಗೂ ದೈವಿಕ ಧರ್ಮಸಂಹಿತೆಯ ಯುಕ್ತಿ ಮತ್ತು ತತ್ವದ ಬಗ್ಗೆ ಅರಿವುಳ್ಳ ವ್ಯಕ್ತಿಯಾಗಿ ನಾವು ಅವರನ್ನು ಕಂಡೆವು.

ಮುಸ್ಲಿಹ್ ಮೌಊದ್(ರ) ನಿಧನಗೊಂಡಾಗ ಪ್ರಸಿದ್ಧ ಲೇಖಕ ಮತ್ತು ರಾಜಕರಣಿಯಾದ ಮಿಯಾ ಮುಹಮ್ಮದ್ ಶಫೀ ಹೀಗೆ ಬರೆದರು: ಮಿರ್ಝಾ ಮಹ್ಮೂದ್ ಅಹ್ಮದ್(ರ) ಖಿಲಾಫತಿನ ಸ್ಥಾನಕ್ಕೇರಿದ ನಂತರ ಯಾವ ರೀತಿಯಲ್ಲಿ ತನ್ನ ಜಮಾಅತನ್ನು ಸಂಘಟಿಸಿದರು ಮತ್ತು ಯಾವ ರೀತಿಯಲ್ಲಿ ಸದರ್ ಅಂಜುಮನ್ ಅಹ್ಮದಿಯಾವನ್ನು ಒಂದು ಸಕ್ರಿಯ ಮತ್ತು ಜೀವಂತ ಸಂಘಟನೆಯನ್ನಾಗಿ ಮಾಡಿದರೋ ಅದರಿಂದ ಅವರ ಅಪಾರವಾದ ಆಡಳಿತಾತ್ಮಕ ಶಕ್ತಿಯ ಬಗ್ಗೆ ಅರಿವಾಗುತ್ತದೆ. ಅವರ ಬಳಿ ಯಾವುದೇ ವಿಶ್ವವಿದ್ಯಾಲಯದ ಡಿಗ್ರಿ ಇರಲಿಲ್ಲ. ಆದರೆ ಅವರು ವೈಯಕ್ತಿಕವಾಗಿ ಅಧ್ಯಾಯನ ನಡೆಸಿ ತನ್ನನ್ನು ನಿಜವಾಗಿಯೂ ವಿದ್ವಾಂಸರನ್ನಾಗಿ ಕರೆಯಲ್ಪಡಲು ಅರ್ಹರನ್ನಾಗಿ ಮಾಡಿದರು. ಮಿರ್ಝಾ ಸಾಹಿಬ್‌ರು ಅತ್ಯಂತ ಪ್ರಜ್ಞಾವಂತ ಮತ್ತು ನಿಪುಣ ಲೇಖಕರು ಆಗಿದ್ದರು ಮತ್ತು ಅವರು ಪ್ರತಿಯೊಂದು

ಸಂದರ್ಭವನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ಉಪಯೋಗಿಸುತ್ತಿದ್ದರು. ಅದರಿಂದ ಅವರ ಜಮಾಅತಿನ ಪ್ರಗತಿಯ ಮಾರ್ಗಗಳು ತೆರೆಯಲ್ಪಡುತ್ತಿದ್ದುವು.

ಹಝ್ರತ್ ಮುಸ್ಲಿಹ್ ಮೌಊದ್(ರ) ವಿವಿಧ ವಿಷಯಗಳಲ್ಲಿ ಜಮಾಅತಿಗೆ ಮತ್ತು ಒಟ್ಟಾಗಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡಿದ್ದರು. ಅವರ ಗ್ರಂಥಗಳು ಅನೇಕ ಬೃಹತ್ ಸಂಪುಟಗಳನ್ನು ಹೊಂದಿವೆ. ಅವರ ಖುತ್ಬಗಳು ಇವೆ. ಹಳೆಯ ರಿಕಾರ್ಡಿನಿಂದ ಪ್ರಕಾಶನಗೊಂಡಿರದ ನೋಟ್ಸ್ ಅಥವಾ ಖುತ್ಬಗಳಿಂದ ಮತ್ತು ಭಾಷಣಗಳಿಂದ ಪವಿತ್ರ ಖುರ್‌ಆನಿನ ವ್ಯಾಖ್ಯಾನಗಳು ಲಭಿಸುತ್ತಿವೆ. ಅವುಗಳನ್ನು ಸಹ ಪ್ರಕಟಿಸಲಾಗುವುದು – ಇನ್‌ಶಾ ಅಲ್ಲಾಹ್. ಅನೇಕ ಪುಸ್ತಕಗಳು ಆಂಗ್ಲ ಭಾಷೆಯಲ್ಲೂ ಪ್ರಕಾಶನಗೊಂಡಿವೆ. ಉರ್ದು ಗೊತ್ತಿಲ್ಲದವರು ಆ ಅರಿವಿನ ಭಂಡಾರದಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆಲ್ಲರಿಗೂ ಆ ಜ್ಞಾನದ ಖಜಾನೆಯಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ.

(ಹುಝೂರ್ ಹೇಳಿದರು:) ಇತ್ತೀಚಿಗೆ ಪಾಕಿಸ್ತಾನದಲ್ಲಿ ಜಮಾಅತಿನ ವಿರುದ್ಧ ವಿರೋಧದ ಅಲೆ ಪುನಃ ಎದ್ದಿದೆ. ಚುನಾವಣೆಯಲ್ಲಿ ಸೋತಿರುವ ಅಥವಾ ತಮ್ಮ ಇಷ್ಟ ಪ್ರಕಾರದ ಫಲಿತಾಂಶ ಲಭಿಸದ ರಾಜಕರಣಿಗಳ ಮತ್ತು ಮೌಲವಿಗಳ ಒಂದು ದೊಡ್ಡ ವಿಭಾಗ ಗಲಭೆ ಹರಡಲಿಕ್ಕಾಗಿ ಪುನಃ ಅಹ್ಮದಿಯರ ಮೇಲೆ ಹಲ್ಲೆ ನಡೆಸುತ್ತಿದೆ. ಆದ್ದರಿಂದ ಅಹ್ಮದಿಯರು ಜಾಗರೂಕರಾಗಿರುವುದರ ಜೊತೆಗೆ ದುಆಗಳನ್ನು ಮಾಡುವುದಕ್ಕೂ ಮತ್ತು ಸದಖಗಳನ್ನು ನೀಡುವುದಕ್ಕೂ ಬಹಳ ಹೆಚ್ಚು ಒತ್ತು ನೀಡಬೇಕಾಗಿದೆ. ಅಲ್ಲಾಹನು ಅಹ್ಮದಿಯರನ್ನು ಸಂರಕ್ಷಿಸಲಿ.

ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ. ಅವರಲ್ಲಿ ಅನೇಕರು ಸೆರೆಮನೆಯಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ಅವರನ್ನು ಅಲ್ಲಾಹನು ಬೇಗನೇ ಸೆರೆಯಿಂದ ಬಿಡುಗಡೆಗೊಳಿಸಲಿ. ಪೆಲಸ್ತೀನಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಮೇಲೂ ಕೃಪೆದೋರಲಿ ಮತ್ತು ಶಕ್ತಿಶಾಲಿ ದೇಶಗಳ ಪೀಡನೆಯಿಂದ ಅವರಿಗೆ ಮುಕ್ತಿ ನೀಡಲಿ.

(ಕೊನೆಗೆ ಹುಝೂರ್ ಘಾನದಲ್ಲಿ ಜಮಾಅತಿನ ಸ್ಥಾಪನೆಗೆ ನೂರು ವರ್ಷ ಪೂರ್ತಿಯಾಗಿದ್ದಕ್ಕಾಗಿ ಜರಗಿಸಲಾಗುವ ಶತಾಬ್ದಿ ಜಲ್ಸ ಸಾಲಾನದ ವಿಜಯಕ್ಕಾಗಿ ದುಆ ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು:) ನಾಳೆ ಇಲ್ಲಿಂದ ಜಲ್ಸದಲ್ಲಿ ನನ್ನ ನೇರ ಪ್ರಸಾರ ಭಾಷಣವಿರುವುದು. ಅಲ್ಲಾಹನು ಎಲ್ಲ ರೀತಿಯಲ್ಲೂ ಅನುಗ್ರಹೀತಗೊಳಿಸಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ० اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak',** Islamabad, Tilford, UK.* On 23-02-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon